



# ಮುಂಬಾಗಿಲ ಕವಿತೆ

ಇಳಿ ಸಂಜೆ
ದೀಪ ಹಚ್ಚುವ ಸಮಯ
ಅಗಲವಾಗಿ ಮುಂಬಾಗಿಲು
ತೆರೆದಿಟ್ಟು
ಏನನ್ನೋ ನೆನೆಯುತ್ತಾ ಮನಸ್ಸು
ಕನಸ ನೇಯುವುದು
ದಿನವೂ ಹೊಸತೆಂಬಂತೆ.

ನಿದ್ದೆಗಣ್ಣಿನಿಂದ ತೂಕಡಿಸುವ
ಕೊನೇ ಹಗಲು
ಲಕ್ಷ್ಮಿ ಮನೆಗೆ ಬರುವ ಹೊತ್ತಂತೆ
ಹುಷಾರು ತಪ್ಪಿದರೂ ಮಂಚದ
ಮೇಲೆ ಸುತರಾಂ ಮಲಗಬಾರದಂತೆ.

ನನ್ನಜ್ಜಿಯಿಂದ ನನ್ನಮ್ಮನಿಗೆ
ನನ್ನಮ್ಮನಿಂದ ರವಾನಿಸಲ್ಪಟ್ಟದ್ದು
ನನ್ನೀ ತನಕ ಹರಿದು ಬಂದಿದೆ
ತೆರೆದ ಬಾಗಿಲ ನಡುವೆ ದೀಪ
ಹಾಗೇ ಉರಿಯುತ್ತಿದೆ.

ದೂರದೂರಿಗೆ ಹೋಗಿ
ನಡುದಾರಿಯಲಿ ಸಿಲುಕಿ
ಒಂದೇ ಚಡಪಡಿಕೆ
ಮುಚ್ಚಿದ ಬಾಗಿಲು ತಟ್ಟಿ
ಲಕ್ಷ್ಮಿ ಹೊರಟೇ ಹೋದಳೆನೋ
ಮುನಿಸು ತೋರಿ.

ಮುಂಬಾಗಿಲ ತೆರೆದಿಡುವ ಸಲುವಾಗಿ
ನೆವಗಳ ಹೇರಿ
ಪಡಸಾಲೆಯಲ್ಲೇ ಕಾಯುತ್ತಾ
ಕುಂತದ್ದು ಅದೆಷ್ಟೋ ಬಾರಿ.

ಇದೀಗ ಮಗಳ ಸರದಿ
ಹೊಸ ಮನೆಯ ಮುಚ್ಚಿದ ಕದದ ಮೇಲೆ
ಚಿತ್ತಾರದ ಕುಸುರಿಯ ನಡುವೆ
ಅಷ್ಟ ಲಕ್ಷ್ಮಿಯರ ಸವಾರಿ.

ಮುಸ್ಸಂಜೆಯ ತಂಪು ಹೊತ್ತಿನಲ್ಲಾದರೂ
ತುಸು ಬಾಗಿಲು ತೆರೆಯಬಾರದೆ...?
ಗೊಣಗಿಕೊಂಡರೆ...

ಗೃಹ ಲಕ್ಷ್ಮಿಯರು ನಿಸೂರಾಗಿರಬೇಕೆಂದರೆ
ಬಾಗಿಲು ಮತ್ತಷ್ಟೂ ಭದ್ರವಾಗಿರಬೇಕಮ್ಮ
ಅನ್ನುತ್ತಾ ಅಗುಳಿ ಬಿಗಿಮಾಡುತ್ತಿದ್ದಾಳೆ
ನಸುನಗೆಯೊಂದ ನನ್ನೆಡೆಗೆ ತೂರಿ.

● **ಸ್ಮಿತಾ ಅಮೃತರಾಜ್, ಸಂಪಾಜೆ**